


# ವ್ಯಾಯಾಮ ಮಾಡುವ ಬಸ್

ಚಿತ್ರ ನೋಡಿ ಇದೇನಿದು ವಿಚಿತ್ರ ಬಸ್ ಎಂದುಕೊಳ್ಳಬೇಡಿ. ಈ ಡಬಲ್ ಡೆಕ್ಕರ್ ಬಸ್ ಕೈಗಳನ್ನೂರಿ ನೆಟ್ಟಗೆ ನಿಲ್ಲುತ್ತದೆ. ಹಿಂಭಾಗ ನೆಲಕ್ಕೂರಿ ಸ್ತಂಭದ ಆಕಾರದಲ್ಲಿ ಕಸರತ್ತು ಮಾಡುತ್ತದೆ. ವ್ಯಾಯಾಮದ ವಿವಿಧ ಭಂಗಿಗಳನ್ನು ಪ್ರದರ್ಶಿಸುವ ಈ ಅದ್ಭುತ ಕಲಾಕೃತಿಯನ್ನು ತಯಾರಿಸಿದವನು ವಿಶ್ವ ಪ್ರಸಿದ್ಧ ಜೆಕ್ ಕಲಾವಿದ ಡೇವಿಡ್ ಸೆನರ್.

2012ರಲ್ಲಿ ಲಂಡನ್ನಿನಲ್ಲಿ ನಡೆದ ಒಲಿಂಪಿಕ್ ಪಂದ್ಯಗಳ ಸಂದರ್ಭದಲ್ಲಿ ತನ್ನ ದೇಶದ ಆಟಗಾರರಿಗೆ ಸ್ಫೂರ್ತಿ ತುಂಬಲೆಂದು ಆತ ಹೀಗೊಂದು ಐಡಿಯಾ ಹಾಕಿದ. 1957ರ ಮಾಡೆಲ್‌ನ ಹಳೆಯ ಬಸ್ಸನ್ನು ಮಾರ್ಪಾಡಿಸಿ, ಅದಕ್ಕೆ ಎರಡು ಕೈಗಳನ್ನು ಅಳವಡಿಸಿದ. ರೋಬಾಟ್‌ನಂತೆಯೇ ಇದು ಕೂಡ ವೈವಿಧ್ಯಮಯ ವ್ಯಾಯಾಮ ವಿಧಾನಗಳನ್ನು ತೋರಿಸಬಲ್ಲುದು. ವಿದ್ಯುತ್‌ನಿಂದ ಕಾರ್ಯನಿರ್ವಹಿಸುವ ಈ ಬಸ್ ಆರು ಟನ್ ಭಾರವಿದೆ.

ಆರು ತಿಂಗಳ ನಿರಂತರ ಪರಿಶ್ರಮದಿಂದ ಮೈದಳೆದ ಬಸ್ಸಿನ ಕಿಟಕಿಗಳು ಒಲಿಂಪಿಕ್ ಪಂದ್ಯವನ್ನು ಪ್ರಸಾರ ಮಾಡುವ ದೂರದರ್ಶನದ ತೆರೆಗಳಾಗಿದ್ದವು. ಇದೀಗ ಈ ಬಸ್ ಪ್ರವಾಸಿಗರು ಸೇರಿದಂತೆ ಸ್ಥಳೀಯರ ಆಕರ್ಷಣೆಯ ಕೇಂದ್ರವಾಗಿದೆ. ನಿರುಪಯುಕ್ತವಾಗಿ ಗುಜರಿ ಸೇರಿದ್ದ ಬಸ್ಸೊಂದು ಕಲಾವಿದನ ಕೈಗೆ ಸಿಕ್ಕಿ ಈಗ ಮರುಜನ್ಮ ಪಡೆದು ತನ್ನ ವಿವಿಧ ಆಟಗಳ ಜನರ ಮನಗೆಲ್ಲುತ್ತಿರುವುದು ವಿಶೇಷವೇ ಸರಿ. ಇದನ್ನು ನೋಡಿದ ಬಳಿಕ ಅಲ್ಲಿನ ಜನತೆ ಕಸದಿಂದ ರಸ ಎಂಬಂತೆ ಹಳೆಯ ನಿರುಪಯುಕ್ತ ವಸ್ತುಗಳಿಂದ ಕಲಾಕೃತಿ ತಯಾರಿಸಿ ಮನೆಯ ಮುಂದೆ ಸ್ಥಾಪಿಸುತ್ತಿದ್ದಾರಂತೆ. ನಮ್ಮಲ್ಲೂ ಇಂತಹ ಕಲಾತ್ಮಕ ಐಡಿಯಾಗಳು ಆಗಾಗ ಮೈದಳೆಯುತ್ತವೆ.

■ ಪ.ರಾಮಕೃಷ್ಣ ಶಾಸ್ತ್ರಿ




